


ಕುಂಜರಾಣಿ ದೇವಿ

ತನ್ನ ಕಾರ್ಯವನ್ನು ಕಟ್ಟುನಿಟ್ಟಾಗಿ ಮಾಡಿದ್ದರೆ ಭಾರತದ ಸಾವಿರಾರು ಕ್ರೀಡಾಪಟುಗಳು ಮದ್ದು ಸೇವನೆಯಲ್ಲಿ ಸಿಲುಕಿ ಕ್ರೀಡಾಜೀವನಕ್ಕೆ ಅಂತ್ಯ ಹಾಡಬೇಕಾಗುತ್ತಿತ್ತು' ಎಂದು ಅವರು ಆತಂಕ ವ್ಯಕ್ತಪಡಿಸಿದ್ದರು.

2008ರಲ್ಲಿ ಪೋರ್ಚುಗಲ್‌ನ ಪೋಲ್‌ವಾಲ್ಟ್ ಅಥ್ಲೀಟ್ ಪಸ್ಕಲ್ ಮರನ್ ಮದ್ದು ಸೇವಿಸಿದ್ದರು. 2004 ಅಥೆನ್ಸ್ ಒಲಿಂಪಿಕ್ಸ್‌ನಲ್ಲಿ 4X100 ಮೀಟರ್ಸ್ ರಿಲೇ ತಂಡದಲ್ಲಿ ಚಿನ್ನ ಜಯಿಸಿದ್ದ ಇಂಗ್ಲೆಂಡಿನ ಮಾರ್ಕ್ ಲೂಯಿಸ್ ಫ್ರಾನ್ಸಿಸ್, ಮೊರಕ್ಕೊದ ಕ್ಯಾಮಿ ಕೆಶ್ಮಿರಿ ಇವರೆಲ್ಲಾ ಮದ್ದು ಸೇವಿಸಿದ್ದು ಸಾಬೀತಾಗಿದ್ದರೂ ವಾಡಾ ಬಹಿರಂಗವಾಗಿ ಎಚ್ಚರಿಕೆ ಮಾತ್ರ ನೀಡಿ ಅವರನ್ನು ಖುಲಾಸೆಗೊಳಿಸಿತ್ತು. ಇನ್ನೂ ಕೆಲ ಕ್ರೀಡಾಪಟುಗಳ ವಿಷಯದಲ್ಲಿ ಕಠಿಣ ತೀರ್ಮಾನ ತೆಗೆದುಕೊಂಡು ಆಜೀವ ನಿಷೇಧವನ್ನೂ ಹೇರಿದೆ. ಆದ್ದರಿಂದ ಈಗ ವಾಡಾದ ಕಾರ್ಯ ವೈಖರಿ ಬಗ್ಗೆಯೂ ಸಾಕಷ್ಟು ಚರ್ಚೆಯಾಗುತ್ತಿದೆ.

## ಎಲ್ಲವೂ ಭಿನ್ನವಲ್ಲ

ನಾಡಾ ಮತ್ತು ವಾಡಾದ ಸಂಸ್ಥೆಗಳು ಪ್ರತಿಭಾರಿಯೂ ಭಿನ್ನ ವರದಿಗಳನ್ನೇ ನೀಡಿಲ್ಲ. ಹಿಂದೆ ಅಶ್ವಿನಿ ಅಕ್ಕುಂಜೆ, ಸೀಮಾ ಅಂಟಿಲ್, ಸಿನಿ ಜೋಸ್, ಮನದೀಪ್ ಕೌರ್, ಡಿಸ್ಕಸ್ ಎಸೆತ ಸ್ಪರ್ಧಿ ಅನಿಲ್ ಕುಮಾರ್, ಜುವ್ವಾ ಮುರ್ಮು, ಅಥ್ಲೀಟ್ ನೀಲಮ್ ಜಸ್ವಂತ್ ಸಿಂಗ್, ಶಾಟ್‌ಪಟ್ ಅಥ್ಲೀಟ್ ವಿ. ಸೌರವ್ ಅವರು ಮದ್ದು ಸೇವಿಸಿದ್ದು ಸಾಬೀತಾದಾಗ ಕೆಲವು ವರ್ಷ ಶಿಕ್ಷೆಯನ್ನೂ ವಿಧಿಸಿದೆ.

ನೂರಾರು ವರ್ಷಗಳ ಕ್ರೀಡಾ ಇತಿಹಾಸ ಹೊಂದಿರುವ ಭಾರತದಲ್ಲಿ ಇದುವರೆಗೆ ಶಿಕ್ಷೆಯಾಗಿದ್ದು ಏಳು ಕ್ರೀಡಾಪಟುಗಳಿಗೆ ಮಾತ್ರ. ಆದರೆ ಮದ್ದು ಸೇವನೆ ಪರೀಕ್ಷೆಯಲ್ಲಿ ಸಿಕ್ಕಿಬಿದ್ದವರು ಸಾವಿರಾರು ಜನ. ಅವರಲ್ಲಿನ ಮದ್ದು ಅಂಶವನ್ನು ಪತ್ತೆ ಹಚ್ಚಲು ನಾಡಾ ಸಂಸ್ಥೆಗೆ ಸಾಧ್ಯವಾಗಿಲ್ಲ.

ಕೆಲವು ತಿಂಗಳುಗಳಿಂದ ಕ್ರೀಡಾಲೋಕದಲ್ಲಿ ಬಿರುಗಾಳಿಯನ್ನೇ ಎಬ್ಬಿಸಿರುವ ರಷ್ಯಾದ ಪ್ರಕರಣ ಕೂಡ ಆ ದೇಶದ ನಾಡಾ ವೈಫಲ್ಯವನ್ನು ಎತ್ತಿ ತೋರಿಸುತ್ತದೆ. ರಷ್ಯಾದ ಬಹುತೇಕ ಅಥ್ಲೀಟ್‌ಗಳು ನಿಷೇಧಿತ ಮದ್ದು ಸೇವಿಸಿದ್ದು ಸಾಬೀತಾಗಿತ್ತು. ಕೆಲ ಕ್ರೀಡಾಪಟುಗಳು ಕೋರ್ಟ್ ಮೆಟ್ಟಿಲೇರಿದ ಕಾರಣ ಹಲವರಿಗೆ ಒಲಿಂಪಿಕ್ಸ್‌ನಲ್ಲಿ ಪಾಲ್ಗೊಳ್ಳಲು ಅವಕಾಶ ಲಭಿಸಿದೆ.

ರಷ್ಯಾದ ಒಲಿಂಪಿಕ್ ಸಂಸ್ಥೆ ಕ್ರೀಡಾಪಟುಗಳನ್ನು ಒಲಿಂಪಿಕ್ಸ್‌ಗೆ ಕಳುಹಿಸುವ ಅಥವಾ ಬಿಡುವ ತೀರ್ಮಾನವನ್ನು ತೆಗೆದುಕೊಳ್ಳುವ ಅಧಿಕಾರ ತನ್ನ ದೇಶದ ಆಯಾ ಕ್ರೀಡಾ ಸಂಸ್ಥೆಗಳಿಗೆ ನೀಡಿತ್ತು. ಆದ್ದರಿಂದ ಅಲ್ಲಿನ ಈಜು ಸಂಸ್ಥೆ ತನ್ನ ದೇಶದ ಯಾವ ಈಜುಪಟುವನ್ನೂ ಒಲಿಂಪಿಕ್ಸ್‌ಗೆ ಕಳುಹಿಸುವುದಿಲ್ಲ ಎಂದು ಸ್ಪಷ್ಟವಾಗಿ ಹೇಳಿತ್ತು. ನಂತರವಾಗಿ ರಷ್ಯಾದ ಕ್ರೀಡಾಪಟುಗಳನ್ನು ಆಯ್ಕೆ ಮಾಡಲು ಐಒಸಿ ಮೂವರು ಸದಸ್ಯರ ಸಮಿತಿಯನ್ನು ರಚಿಸಿ ಅಂತಿಮವಾಗಿ 29 ಈಜುಪಟುಗಳು ಮತ್ತು 11 ಬಾಕ್ಸರ್‌ಗಳಿಗೆ ಪಾಲ್ಗೊಳ್ಳಲು ಅನುಮತಿ ನೀಡಿದೆ. ಐಒಸಿ, ನಾಡಾ ಮತ್ತು ವಾಡಾ ಮೂರೂ ಸ್ವತಂತ್ರ ಸಂಸ್ಥೆಗಳೇ ಆಗಿದ್ದರೂ ಸ್ವತಂತ್ರವಾಗಿ ಕೆಲಸ ಮಾಡುವಷ್ಟು ಸಮರ್ಥವಾಗಿಲ್ಲ. ಹೀಗಾಗಿ ಮದ್ದು ಪರೀಕ್ಷೆಗಳ ವರದಿಗಳು ವಿವಾದಕ್ಕೆ ಒಳಗಾಗಿ ಹಲವು ಪ್ರಶ್ನೆಗಳನ್ನು ಹುಟ್ಟುಹಾಕುತ್ತಿವೆ.


ಸಿಗಂಧೂರು ಶ್ರೀದೇವಿ ಜ್ಯೋತಿಷ್ಯಂ



ಪ್ರಸಿದ್ಧ ಜ್ಯೋತಿಷ್ಯ ತಾಂತ್ರಿಕರು
ಶ್ರೀ ಚಂದ್ರಶೇಖರ್
ಕೇರಳ ಹಾಗೂ ಕೊಳ್ಳೆಗಾಲದ ಮಾಂತ್ರಿಕರು

99722 95444

ಭಾನಾಮತಿ ಸಿದ್ಧಿಸಾಧಕರು ಬೆಂಗಳೂರು ಮತ್ತು ಚೆನ್ನೈನಲ್ಲಿ ಅಪಾರ ಜನಮನ್ನಣೆ ಪಡೆದಿರುವ ಪ್ರಸಿದ್ಧ ಜ್ಯೋತಿಷ್ಯ ತಾಂತ್ರಿಕರು ಶ್ರೀ ಚಂದ್ರಶೇಖರ್‌ರವರು ಸಿಗಂಧೂರು ಚೌಡೇಶ್ವರಿ ದೇವಿಯ ಉಪಾಸಕರು ನಿಮ್ಮೆಲ್ಲ ಸಮಸ್ಯೆಗಳಿಗೆ ಶೀಘ್ರ ಶಾಶ್ವತ ಪರಿಹಾರ ಮಾಡಿಕೊಡುತ್ತಾರೆ.

ವಶೀಕರಣ ಸ್ಪೆಷಲಿಸ್ಟ್
ಸ್ತ್ರೀ ವಶೀಕರಣ, ಪುರುಷ ವಶೀಕರಣ, ಲೈಂಗಿಕ ವಶೀಕರಣ, ಇಷ್ಟಪಟ್ಟವರು ನಿಮ್ಮಂತಾಗಲು, ಲಕ್ಷ್ಮೀ ವಶೀಕರಣ, ಸ್ತ್ರೀ ಪುರುಷರ ಗುಪ್ತ ಸಮಸ್ಯೆಗಳಿಗೆ ಕೇವಲ 2 ದಿನಗಳಲ್ಲಿ ಪರಿಹಾರ ಶತಸಿದ್ಧ.

ಸ್ತ್ರೀಯರಿಗೆ ವಿಶೇಷ ಪರಿಹಾರ

ಮದುವೆ ವಿಳಂಬ, ಪ್ರೀತಿಯಲ್ಲಿ ನಂಬಿ ಮೋಸ, ಇಷ್ಟಪಟ್ಟವರಿಂದ ಅನುಕೂಲ ಮಾಡಿಕೊಳ್ಳಲು, ಗಂಡ ಹೆಂಡತಿ ಕಲಹ, ವ್ಯಾಪಾರಾಭಿವೃದ್ಧಿ, ಸಾಲಗಾರರ ಕಿರಿಕಿರಿ, ಸಂತಾನ ಸಮಸ್ಯೆ, ಆರೋಗ್ಯ, ಲೈಂಗಿಕ ಸಮಸ್ಯೆ, ಕುಟುಂಬ ಕಲಹ, ಮಾಟಮಂತ್ರ ನಿವಾರಣೆ, ಸ್ತ್ರೀಯರ personal problems, ಇಷ್ಟಪಟ್ಟವರು ನಿಮ್ಮಂತಾಗಲು, ಹಣಕಾಸು, ಮಕ್ಕಳು ಪ್ರೀತಿ ಪ್ರೇಮದಲ್ಲಿ ಬಿದ್ದು ತಂದೆ ತಾಯಿಗಳ ಮಾತು ಕೇಳದಿದ್ದಲ್ಲಿ

ಸ್ತ್ರೀ ಪುರುಷರ ಕಠಿಣ ಗುಪ್ತ ಹತ್ತು ಹಲವು ಸಮಸ್ಯೆಗಳಿಗೆ 2 ದಿನಗಳಲ್ಲಿ 200% ಗ್ಯಾರಂಟಿ ಪರಿಹಾರ

ಖಾಯಂ ವಿಳಾಸ:
ಸಿಗಂಧೂರು ಶ್ರೀದೇವಿ ಜ್ಯೋತಿಷ್ಯಂ,
ತಾಂತ್ರಿಕರು ಶ್ರೀ ಚಂದ್ರಶೇಖರ್
U.N ಆರ್ಕೆಡ್, ಇಂದ್ರಪ್ರಸ್ಥ ಹೋಟೆಲ್ ಹತ್ತಿರ,
ವಿಜಯನಗರ ಮುಖ್ಯ ಬಸ್ ನಿಲ್ದಾಣದ ಹಿಂಭಾಗ,
ವಿಜಯನಗರ, ಬೆಂಗಳೂರು